**ಸಿ.ಸಿ.ನಂ.** 2069/2023

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ. 2069**/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಸತಿಶಿ |
| ತಂದೆಯ ಹೆಸರು | : | ಜಟ್ಟಿನಾಯ್ಕು |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೃಷಿ |
| ವಾಸ್ತವ್ಯ | : | ಉಳ್ಳೂರು ಮಠ ಕುಮಟಾ |

(ಇಂದು ದಿನಾಂಕಃ 27-07-**2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಸಾ.2 ರಿಂದ 9ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ. ಆರೋಪಿತರು ನಮ್ಮ ಊರಿನವರಾಗಿರುತ್ತಾರೆ. ನಮ್ಮ ಹಾಗೂ ತಿಮ್ಮಪ್ಪ ದೇವಪ್ಪ ಮಾರಾಠಿ ನಡುವೆ ದಾರಿಯ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ಇದ್ದು, ದಿಃ 28-09-2023 ರಂದು ನಾವು ಮಿಟಿಂಗ್ ಮಾಡಿ ಸದರಿ ವಿಷಯವನ್ನು ಬಗೆಹರಿಸಿಕೊಂಡಿರುತ್ತೇವೆ.

ಸದರಿ ಸಭೆಯಲಿಃ ನಾಲ್ಕು ಜನ ಆರೋಪಿತರು ಇದ್ದರು. ನಮಗೂ ಹಾಗೂ ಆರೋಪಿಗೂ ಮಾತಿಗೆ ಮಾತಾಗಿರುತ್ತದೆ. ಆಮೇಲೆ ಈ ಕುರಿತಾಗಿ ಆರೋಪಿತದಿರು ನಮ್ಮ ಮೇಲೇ ದ್ವೇಷದಿಂದ

**ಸಿ.ಸಿ.ನಂ.** 2069/2023

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಇದ್ದರು. ಅದೇ ದಿನ ಸುಮಾರು 04.00 ಗಂಟೆ ನಾನು ಸಂತೆಗುಳಿಯ ಹತ್ತಿರ ಇದ್ದಾಗ 1ನೇ ಆರೋಪಿತನು ನನಗೆ ಕೈ ಸನ್ನೆಯನ್ನು ಮಾಡಿ ಬೈದು ಹೋಗಿರುತ್ತಾರೆ. ನಂತರ ನಾನು ಬಸ್ತಿಕೇರೆಯ ಹತ್ತಿರ ಸಿಕ್ಕಿದಾಗ ನಾನು ಈ ಕುರಿತಾಗಿ 1ನೇ ಆರೋಪಿತನನ್ನು ವಿಚಾರಿಸಿದಾಗ 1ನೇ ಆರೋಪಿತನು ನನ್ನನ್ನು ಉದ್ದೇಶಿಸಿ ಬೋಳಿ ಮಗನೇ ಸೂಳೆ ಮಗನೆ ಎಂದು ಬೈದು ನೀನನ್ನ್ನು ನಾನು ನೋಡಿ ಕೊಳುಳತ್ತೇನೆ ಎಂದು ಬೈದು ಹೋಗಿರುತ್ತಾರೆ. ನಂತರ ನಾನು ಸುಮಾರು 07.15 ಗಂಟೆಗೆ ನಾನು ಹಾಗೂ ಚಾಸಾ.4ರವರು ವಾಸ್ತಿಕಟೆಯ ಹತ್ತಿರ ನಿಂತುಕೊಂಡು ಮಾತನಾಡುತ್ತಿದ್ದಾಗ ನಾಲ್ಕು ಜನ ಆರೊಪಿತರು ನನ್ನನ್ನು ಅಡ್ಡಗಟ್ಟಿಕ ತ್ತಿಯಿಂದ 1ನೇ ಆರೋಪಿತನು ನನ್ನ ತಲೆಗೆ ಹಲ್ಲೆ ಮಾಡಿರುತ್ತಾನೆ. 2ನೇ ಆರೋಪಿತನು ದೊಣ್ಣೆಯಿಂದ ಎಡಭುಜಕ್ಕೆ ಹೊಡೆದಿರುತ್ತಾರೆ. 3ನೇ ಆರೋಪಿತನು ಕಲಿ ್ಲನಿಂ ಬದಗಾಲಿಗೆ ಹೊಡೆದಿರತ್ತಾರೆ. ಅಲ್ಲೆ ಇದ್ದ ಚಾಸಾ.4ರವರು ನನ್ನನ್ನು ತಪ್ಪಿಸಲು ಬಂದಾಗ 1ನೇ ಆರೋಪಿತನು ನನಗೆ ಹಾಗೂ ಚಾಸಾ.4ರವರಿಗೆ ಹೊಡೆದಿರುತ್ತಾನೆ. 4ನೇ ಆರೋಪಿತರು ಎಡಭುಜಕ್ಕೆ ಸಿಚಿ ಎಡಕೈಂಮೊಣಕಂಟಿಗೆ ಹಾಗೂ ತಲೆಗೆ ಹೊಡೆದಿರುತ್ತಾನೆ, ಸದರಿ ಸಂದರ್ಭದಲ್ಲಿ ಚಾಸಾ.5ರವರು ನಮ್ಮನ್ನುನತಪ್ಪಿಸಿತ್ತಾರೆ. ನಂತರ ಆರೋಪಿತರು ಘಟನಾಾ ಸ್ಥಳದಿಂದ ಹೋಗಬೇಕಾದರೆ ಬೋಳಿ ಮಕ್ಕಳೆ ನಿಮ್ಮನುನ ಇಪ್ಟಕ್ಕೆ ಬಿಡುವುದಿಲ್ಲ ನಿಮ್ನು್ನ ಕೊಲೆ ಮಾಡಿ ಅಘನಾಶಿದಿ ಹೊಳೆಗೆ ಎಸೆಯುವುದಾಗಿ ಹೇಳಿ ಹಲ್ಲೆ ಉಪ ೋಗಿಸಿದ ವಸುತಗಳನುನ ಅಲ್ಲಿಯೇ ಬಿಸಾಡಿ ಹೋಗಿರುತ್ತಾರೆ. ನಂತರ ನಾನು ಒಂದು ವಾಹನವನ್ನು ಮಾಡಿಕೊಂಡು ಆಸ್ಪತ್ರೆಗೆ ಬಂದಿರುತ್ತೇವೆ. ನಂತರ ದೂರನ್ನು ನೀಡಿರುತ್ತೇನೆ.

**ಸಿ.ಸಿ.ನಂ.** 2069/2023

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲತಿಯು ದೂರಾಗಿದ್ದು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ದೂರು ದಿನ ಮಾರನೇಯ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಸಂದರ್ಭದಲ್ಲಿ ನಾನು ಅವರಿಗೆ ಮಾಹಿತಿಯನ್ನು ನೀಡೀರುತ್ತೇನೆ. ಸದರಿ ಸಂದರ್ಭದಲ್ಲಿ ಚಾಸಾ.4ರವರ ಪ್ಯಾಂಟ, ನನ್ನ ಟೀ ಶರ್, ಕತ್ತಿ, ರಾಡ, ಎರಡು ದೊಣ್ಣೆ ಹಾಗೂ ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಪಂಚನಾಮೆಯಾಗಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಪೊಲೀಸರು ಭವಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಮೂರು ಭವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದುಅದನ್ನು ನಿಪಿ.3 ರಿಂದ 5 ಎಂದು ಗುರುತಿಸಲಾಯಿತು. ಆರೋಪಿತರು ಹಲ್ಲೆಗೆ ಉಪಯೋಗಿಸಿದ ವಸ್ತುಗಳನ್ನು ಹಾಗೂ ಘಟನೆಯ ಸಂದರ್ಭದಲ್ಲಿ ನಾನು ಹಾಗೂ ಚಾಸಾ.1ರವರು ಧರಿಸಿದ್ದ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ.

1. ಕತ್ತಿಯನ್ನು ಮು.ಮಾಲು 1 ಎಂದು,
2. ಕಾಡು ಜಾತಿಯ ಕಟ್ಟಿಗೆ ಮು.ಮಾಲು.2 ಎಂದು, ಸಾಕ್ಷಿಯ ಸಹಿಯನ್ನು ಮು.ಮಾಲು.2(ಎ) ಎಂದು,

**ಸಿ.ಸಿ.ನಂ.** 2069/2023

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

3. ಕೈಮುಷ್ಟಿ ಗಾತ್ರದ ಕಲ್ಲು ನು ಮು.ಮಾಲು.3 ಎಂದು, ಸಾಕ್ಷಿಯ ಸಹಿಯನ್ನು ಮು.ಮಾಲು.3(ಎ) ಎಂದು,

4. ಕಬ್ಬಿಣದ ರಾಡ ಮು.ಮಾಲು.4 ಎಂದು, ಸಾಕ್ಷಿಯ ಸಹಿಯನ್ನು ಮು.ಮಾಲು.4(ಎ) ಎಂದು

5. ಶರ್ಟ ಮು.ಮಾಲು.5 ಎಂದು, ಸಾಕ್ಷಿಯ ಸಹಿಯನ್ನು ಮು.ಮಾಲು.5(ಎ) ಎಂದು

6. ಟೀ ಶರ್ಟ ಮು.ಮಾಲು.6 ಎಂದು, ಸಾಕ್ಷಿಯ ಸಹಿಯನ್ನು ಮು.ಮಾಲು.6(ಎ) ಎಂದು

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ನನ್ನ ಮುಖ್ಯ ವಿಚಾರಣೆಯ ಸಂದರ್ಭದಲ್ಲಿ ಪೊಲೀಸರು ಎರಡು ದೊಣ್ಣೆಯನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು ಪೊಲೀಸರು ಒಂದು ದೊಣ್ಣೆಯನ್ನು ವಶಪಡಿಸಿಕೊಂಡಿರುತಾತರೇ ಎಂದರೆ ಸರಿಯಲ್ಲ. ಪೊಲೀಸರು ಪಂಚನಾಮೆಯ ಸಮಯದಲ್ಲಿ ಯಾವುದೇ ಪ್ಯಾಂಟನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ.

**ಸಿ.ಸಿ.ನಂ.** 2069/2023

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

**ಪಾಟೀ ಸವಾಲು –ಆರೋಪಿ ಪರ ಶ್ರೀ ಎಂ.ಟಿ.ಹೆಚ್. ವಕೀಲರಿಂದ**

ನಾನು ಕೃಷಿ ಕೆಲಸವನ್ನು ಮಾಡುತ್ತೇನೆ. ಅದು ಹೊರತುಪಡಿಸಿ ನಾನು ಆಟೋ ಚಾಲಕನಾಗಿ ಕೆಲಸವನ್ನು ಮಾಡುತ್ತೇನೆ. ನಾನು ನಮ್ಮ ಮನೆಯ ಉಪಯೋಗಕ್ಕಾಗಿ ಆಟೋವನ್ನು ಓಡಿಸುತ್ತೇನೆ. ಈ ಘಟನೆಯ ಪೂರ್ವದಲ್ಲಿ ಹಾಗೂ ನಮ್ಮ ಸಮುದಾಯ ಹಾಗೂ ಮರಾಠಿ ಸಮುದಾಯ ನಡುವೆ ಯಾವುದೇ ಗಲಾಟೆ ನಡೆದಿರುವುದಿಲ್ಲ. ನಮ್ಮ ಸಮುದಾಯ ಮರಾಠಿ ಸಮುದಾಯ ಹಾಗೂ ಬೇರೆ ಸಮುದಾಯದವರು ಎಲ್ಲರೂ ಒಟ್ಟೂ ಸೇರಿ ನಮ್ಮ ಸಂತೆಗುಳಿ ಗ್ರಾಮದಲ್ಲಿ ಒಳ್ಳೇಯ ರೀತಿಯಿಂದ ಇದ್ದೆವು. ನಮ್ಮ ಮಾಸ್ತಿ ಮನೆ ದೇವಸ್ಥಾನಕ್ಕೆ ನಾವೆಲ್ಲರೂ ಗ್ರಾಮಸ್ಥರು ಪೂಜೆ ಮಾಡುತ್ತೇವೆ ಎಂದರೆ ಸರಿ. ನಮ್ಮ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಯಾವುದೇ ಕಮಿಟಿ ಇರುವುದಿಲ್ಲ.ಸದರಿ ದೇವಸ್ಥಾನಕ್ಕೆ ಗ್ರಾಮಸ್ಥರೆಲ್ಲರೂ ಬಂದು ಪೂಜೆ ಮಾಡಿ ಹೋಗಬಹುದು. ಸದರಿ ದೇವಸ್ಥಾನದಲ್ಲಿ ವಾರ್ಷಿಕ ವರ್ಧಂತಿಗಳು ನಡೆಯುತ್ತವೆ ಎಂದರೆ ಸರಿ. ದೇವಸ್ಥಾನ ಖರ್ಚು ವೆಚ್ಚಗಳನ್ನು ನೊಡಿಕೊಳ್ಳಲು ಒಂದು ಹತ್ತು ಜನರು ಗುಂಪು ಇದ್ದು ಅದನ್ನು ಅವರೇ ನೋಡಿಕೊಂಡು ಹೋಗುತ್ತಾರೆ. ಸದರಿ ದೇರ್ವಸ್ಥಾನಕ್ಕೆ ಸಂಬಂಧಿಸಿದಂತಹ ವಿಚಾರ ಹಾಗೂ ಇತರ ವಿಚಾರಗಳ ಬಗ್ಗೆ ಸದರಿ 10 ಜನರು ಸೇರಿ ಮಾತನಾಡಿ ಮಾಡುತ್ತೇವೆ ಎಂದರೆ ಸರಿ.

ನಮ್ಮ ಮನೆಗೆ ಹೋಗುವ ದಾರಿಯ ವಿಚಾರವಾಗಿ ಗಲಾಟೆಯಾಗಿರುತ್ತದೆ. ಗಣಪತಿ ದೇವಸ್ಥಾನಕ್ಕೆ ಹೋಗುವ ದಾರಿಯ ವಿಚಾರಕ್ಕೆ ಸಂಬಧಿಸಿದಂತೆ ನಮ್ಮ ನಡುವೆ ಗಲಾಟೆಯಾಗಿರತ್ತದೆ. ಸದರಿ ಗಲಾಟೆಯು ದಿನಾಂಕ 28-09-2023 ರಂದು ಆಗಿರುತ್ತದೆ. ಸದರಿ ಗಣಪತಿ ದೇಸ್ಥಾನವು ಉಳೂ-ರು ಮಠದಲ್ಲಿ ಇದೆ. ಸದರಿ ದೇವಸ್ಥಾ ದೊಣ್ಣ ದೆವಸ್ಥಾನವಾಗಿದ್ದು ಅದಕ್ಕೆ ಪ್ರತ್ಯೇಕವಾಗಿ ಕಮಿಟೆ ಇದೆ ಎಂದರೆ ಸರಿ. ಸದರಿ ಕಮಿಟಿ ಯಲ್ಲಿ ಎಲ್ಲ

ಸಮಾಜದವರು ಇದ್ದಾರೆ. ನಮ್ಮ ಮಾತುಕತೆಗೆ ಸಂಬಂಧಿಸಿದಂತೆ 25 ರಿಂದ 30 ಜನರು ಸೇರಿರುತ್ತಾರೆ. ನಮ್ಮ ಮಾತುಕತೆಗೆ ಸಂಬಧಿಸಿದಂತೆ ಸರ್ಕಾರಿ ಅಧಿಕಾರಿಗಳು ಹಾಗೂ ಬೇರೆ ಸಮಾಜದವರು ಕೂಡ ಬಂದಿರುತ್ತಾರೆ. ಸದರಿ ಸಭೆಯು ಬೆಳಿಗ್ಗೆ 10.00 ರಿಂದ 11.00ಗಂಟೆಯವರೆಗೆ ಇತ್ತು. ಸದರಿ ಸಭೆಯಲ್ಲಿ ದಾರಿಯ ವಿಚಾರವಾಗಿ ಯಾವುದೇ ತೀರ್ಮಾನವಾಗಿರುವುದಿಲ್ಲ. ದಾರಿಯ ಸ್ಥಳವು ದಾರಿಗಾಗಿ ಬಿಟ್ಟಂತಹ ಸ್ಥಳವಾಗಿದ್ದು ಅದರಲ್ಲಿ ತಿಮ್ಮಪ್ಪ ಮರಾಠಿ ಇವರಿಗೆ ಯಾವುದೇ ಸಂಬಂಧವಿರುವುದಿಲ್ಲ.

ಈ ಘಟನೆ ನಡೆಯುವ ಒಂದು ದಿನ ಹಿಂದೆ ತಿಮ್ಮಪ್ಪ ಮಾರಾರಿ, ಹಾಗೂ 1ನೇ ಆರೋಪಿತನು ಓಡಾಡುವ ಜಾಗಕ್ಕೆ ಸಂಬಂಧಿಸಿ ಬೇಲಿ ಹಾಕಿರುತ್ತಾರೆ. ದಾರಿಯ ಸ್ಥಳವು ಯಾರಿಗೆ ಸಂ ಬಂಧಿಸಿದ ಸ್ಥಳ ಎಂಬ ಬಗ್ಗೆ ನಮಗೆ ಹಾಗೂ ಆರೊಪಿತರಿಗೆ ತಿಳಿದಿರುವುದಿಲ್ಲ.ಗಣಪತಿ ದೇವಸ್ಥಾದಿನಕ್ಕೆ ಹೋಗುವ ದಾರಿಯನ್ನು ಆರೋಪಿತರು ಹಾಗೂ ತಿಮ್ಮ ಪ್ಪ ಮರಾಠಿಯವರು ಸೇರಿ ಬಂದ ಮಾಡಿರುತ್ತಾರೆ. ದೇವಸ್ಥಾನದ ಕಮಿಟಿಯವರು ಆರೋಪಿತ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಈ ಬಂದ ಮಾಡಿದ ಕುರಿತಾಗಿ ನಾವು ಪಂಚಾಯತಿಗೆ ಯಾವುದೇ ಆರ್ಜಿಯನ್ನು ನೀಡಿರುವುದಿಲ್ಲ ಸಾಕ್ಷಿ ಮುಂದುವರಿದು ನಾವು ಮೌಖಿಕವಾಗಿ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಈ ಘಟನೆ ನಡೆದಿದೆ ಎನ್ನಲಾದ ದಿನ ಇಬ್ಬರೇ ನಿಂತುಕೊಂಡು ಮಾತನಾಡುತ್ತಿದ್ದೆವು. ಆಗ ಸಮಾರು 07.15 ಗಂಟೆಯಾಗಿತ್ತು.ಸದರಿ ಸಂದರ್ಭದಲ್ಲಿ ಕ್ತಲೆಯಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬೆಳಕಿತ್ತು ಎಂದು ನುಡಿಯುತ್ತಾರೆ. ಆರೋಪಿತರು ಕತಿಯನ್ನು ತಂದು ಏಕಾಏಕಿಯಾಗಿ ನನ್ನ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ. ಆರೋಪಿತರು ಒಬ್ಬರಾದ ನಂತರ ಒಬ್ಬರು ಬಂದು ಹಲ್ಲೆ ಮಾಡಿರುತ್ತಾರೆ. ಮು.ಮಾಲು 1ರಿಂದ ಹೊಡೆದ ನಂತರದಲ್ಲಿ ನನ್ನ ತಲೆಗೆ ಕಡಿದ ಗಾಯವಾಗಿತ್ತು ಹಾಗೂ ನನ್ನ ಎಡಕೈ ಹಾಗೂ ಬಲಗೈಗೆ ಕತ್ತಿಯಿಂದ ಹಲ್ಲೆ ಮಾಡಿರುತ್ತಾರೆ. ನಾನು ಆರೋಪಿತನು

ಹಲ್ಲೆಮಾಡುವ ಸಂದರ್ಭದಲ್ಲಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಆಗ ಕೆಳಗಡೆ ಬಿದ್ದ ನಂತರದಂಲ್ಲಿ ಆರೋಪಿತರನು ನನ್ನ ಎರಡು ಕೈಗಳಿಗೆ ಹಲ್ಲೆ ಮಾಡಿರುತ್ತಾನೆ. 4ನೇ ಆರೋಪಿತನು ಚಾಸಾ.4ರವರಿಗೆ ಕಬ್ಬಿಣದ ರಾಡ ಹೊಡೆದಿದ್ದು ಅವರ ತಲೆಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಸದರಿ ಸಂದರ್ಭದಲ್ಲಿ ಅವರ ಕೈಯ ಮಣಿಕಟ್ಟು ಮುರಿದು ಹೋಗಿರುತ್ತದೆ. ನನಗೆ ಮು.ಮಾಲು.3 ರಿಂದ ಹೊಡೆದು ಗಲಗಾಲಿಗೆ ತರಚಿದ ಗಾಯವಾಗಿರುತ್ತದೆ. ನಮ್ಮ ನಡುವೆ ಗಲಾಟೆಂ ನಡೆದ ಸಂದರ್ಭದಲ್ಲಿ ಸ್ಥಳದಲ್ಲಿ ಯಾರು ಇರಲಿಲ್ಲ. ಆರೊಪಿತರು ನನಗೆ ಮಾಡಿದ ಹಲ್ಲೆಯಿಂದ ಸ್ಥಳದಲ್ಲಿ ಬಿದಿಐದಾದಗ ನಂತರ ಪುನಃ ಸ್ಥಳದಲ್ಲಿ ಹಲ್ಲೆ ಮಾಡಿದ್ದು ಚಾಸಾ.5 ಹಾಗೂ 6ರವರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರು ಚಾಸಾ.5 ಹಾಗೂ 6ರವರಿಗೆ ಯಾವುದೇ ಹಲ್ಲೆ ಯನ್ನು ಮಾತಡಿರುವುದಿಲ್ಲ. ಘಟನೆ ನಂತರ ನಮ್ಮ ಮೈಮೇಲೆ ರಕ್ತ ಹರಿಯು ತ್ತಿದ್ದರಿಂದ ಅಲ್ಲೆ ಇದ್ದ ಒಂದು ವಾಹನದ ಮುಖಾಂತರ ನಮಂನುನ ಆಸ್ಪತ್ರಗೆ ಕರೆದುಕೊಂಡು ಬಂದಿರುತತಂದೆ.ಸ ಂತೆಗುಳಿಯಿಂದ ಕಮುಟಾ 20 ರಿಂದ 30 ಕಿ.ಮಿ ದೂರ ಇದೆ ಎಂದರೆಸ ರಿ, ಸಂತೆಗದಿುಳಿಯಿಂದ ಕಮುಟಾನಿಕ್ಕೆ ಬರಲು 20 ನಿಮಿಷ ಬೇಕು ಎಂದರೆ ಸರಿ.

ನಾಕಿ ಆಸ್ಪತ್ರೆಗೆ ಬಂದ ನಂ ಾತರದ್ಲಿ ನಾು ಒಳರೋಗಿಯಾಗದಾಖಲಾಗಿರಲಿಲ್ಲ. ನಾವು ಸರ್ಕಾರಿ ಆಸ್ಪತ್ರೆಯಲ್ಲಿ 1 ಗಂಟೆಗಳ ಕಾಲ ಇದ್ದೆವು. ನನಂತರ ಪೊಲೀಸರು ಆಸ್ಪತ್ಗೆ ಬಂದಿರುತ್ತಾರೆ. ನಿಪಿ.1ನ್ನು ನಾನೇ ಪೊಲೀಸರಿಗೆ ಬರದುಕೊಟ್ಟಿರುತ್ತೇನೆ, ನಿಪಿ.1ನ್ನು ನಾನು 15 ನಿಮಿಪಬ್ಗಳ ಕಾಲ ಆಸ್ಪತ್ರೆಯಲ್ಲಿ ಬರೆದಿರುತ್ತೇನೆ. ನನಗೆ ನಿಪಿ.1ನ್ನು ಬರೆಯುವ ಸಂದರ್ಬದಲ್ಲಿ ದಸದರಿ ದಾಖಲಾತಿಯನ್ನು ಬರೆಯುವ ಸಾಮರ್ಥ್ಯ ನನಗೆ ಇತ್ತು. ನಿಪಿ.1ನ್ನು ರಲ್ಲಿ ನಾನು ಗಣಪತಿ ದೇವಸ್ಥಾನದ ಕುರಿತಾಗಿ ನಮೂದಿಸಿರುವುದಿಲ್ಲ. ಈ ವಿಷಯವನ್ನು ನಿಪಿ.1ರಲ್ಲಿ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ನಾವು ಘಟನೆ ನಡೆದ ದಿನ ಮನೆ ಹೋಗಲು ಬಳಗ್ಗಿನ ಜಾವ 03.00 ಗಂಟೆಯಾಗಿರುತ್ತದೆ.

**ಸಿ.ಸಿ.ನಂ.** 2069/2023

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ನಿಪಿ.2ನ್ನು ತಯಾರಿಸಲು ಪೊಲೀಸರು ನನಗೆ ಯಾವುದೇ ನೋಟಿಸನ್ನು ನೀರುವುದಿಲ್ಲ. ಪೊಪಿಲಸರು ನನ್ನ ಜುತೆ ಯಾರನ್ನು ಕರೆದುಕೊಡಯಿ ಬನ್ನಿ ಎಂದು ಹೇಳಿರುವುದಿಲ್ಲ. ನಿಪಿ.2ನ್ನು ತಯಾರಿಸುವ ಸಂದರ್ಭದಲ್ಲಿ ಘಟನಾ ಸ್ಥಳದಲ್ಲಿ 3-4 ಜನ ಪೊಲೀಸರು ಇದ್ದರು. ಸದರಿ ಸಂದರ್ಭದಲ್ಲಿಗಣಪತಿ ದೇಸ್ಥಾವದ ಕಮಿಟಿಯವರು ಬಂದಿರಲಿಲ್ಲ. ನಿಪಿ.2ನ್ನು ತಯಾರಿಸಲು ನಾನು 11.00 ಗಂಟೆಗೆ ಹೋಇಗಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗುವ ಸಮಯದಲ್ಲಿ ಪೊಲೀಸರು ಬಂದಿದ್ದರು. ನಾನು ಘಟನಾ ಸ್ಥಳಕ್ಕೆ ಹೋಗುವ ಸಮಯದಲ್ಲಿ ಪಂಚರು ಪ ಘಟನಾ ಸ್ಥಳಕ್ಕೆ ಬರುತಿತದ್ದರು. ನಾನು ಘಟಂನಾ ಸ್ಥಳಕ್ಕೆ ಹೋಗುವ ಸಂದರ್ಬದಲ್ಲಿ ಪೊಲೀಸರು ಹಾಗೂ ಸ್ಥಳೀಕರು ಅಲ್ಲೆ ಇದ್ದರು. ನಾನು ಘಟನೆ ಸ್ಥಳಕ್ಕೆ ಪೊಲೀಸರು ಪಂಚನಾಮೆಯ ಪ್ರಕ್ರಿಯನ್ನು ಶುರು ಮಾಡಿರುತ್ತಾರೆ. ಪಂಚಾಯತಿ ಪ್ರಕ್ರಿಯೇಗಳು ಒಂದು ತಾಸಿನಲ್ಲಿ ಮೂಗಿರುತ್ತದೆ. ನಾನು ಘಟನಾ ಸ್ಥಳದಲ್ಲಿ ಮೂರು ಸಹಿಗಳನ್ನು ಹಾಕಿರುತ್ತೇನೆ. ನಿಪಿ.2ನ್ನು ನಾನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಎಷ್ಟು ಭಾವಪತ್ರಗಳನುನ ತೆಗೇದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮು.ಮಾಲು.1 ರಿಂದ 6ನ್ನು ಪೊಲೀಸರಿಗೆ ನಾನು ತೋರಿಸಿಕೊಟ್ಟಿದ್ದು ನಂತರ ಅವರು ತೆಗೆದುಕೊಂಡು ಹೋಗಿರುತ್ತಾರೆ. ನಾನು ಎಂ.ಓ.1 ರಿಂದ 6ನ್ನು ಸ್ಥಳದಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತ ಮೇಲಿನ ದ್ವೇಷದಿಂದಸ ುಳ್ಳು ಪ್ರಕಣ ದಾಖಲು ವಾಡಿದ್ದೇನೆ ಎಂದರೆಸ ರಿಲ್ಲು ಸಿ, ಆೆರುಪಿತರು ನಮಂ ವಿರುದಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸಂತೆಗುಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಆರೋಪಿತರಿಗೆ ಹಾಗೂ ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ರಸ್ತೆಯ ವಿಚಾರವಾಗಿ ಆರೋಪಿತರ ಮೇಲೆದ್ವೇಷದಿಂದ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ

**ಸಿ.ಸಿ.ನಂ.** 2069/2023

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿರುವ ಮರಾಠಿ ಸಮುದಾಯದವರನ್ನು ಹತ್ತಿಕ್ಕುವ ಉದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲು ಮಾಡಿ ಅವರು ನ್ಯಾಯಾಲಯಕ್ಕೆ ಅಲೆದಾಡುವಂತ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರರಕಣ ದಾಖಲು ಮಾಡಿದ ನಂತರ ನಾವು ಆರೊಪಿತರ ವಿರುದ್ದ ಹಲವಾರು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದ

ಪ್ರ.ದ.ನ್ಯಾ.ದಂ. ಕುಮಟಾ